ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ.
ಆಡಳಿತಾಧಿಕಾರಿಗಳ ಕಛೇರಿ,
ಉದ್ಯಾನಗಿರಿ, ನವನಗರ, ಬಾಗಲಕೋಟ – 587 104

ಸಂ.ಆಕ/ಸಿಶಾ/ನಿವೃತ್ತಿ-2015/ಸುತ್ತೋಲೆ/ /2014-15 ದಿನಾಂಕ: 18.03.2015

# ಸುತ್ತೋಲೆ

ವಿಷಯ: ನಿವೃತ್ತಿ ವೇತನ ಪಾವತಿ ಕ್ಲೇಮನ್ನು ಇತ್ಯರ್ಥಪಡಿಸುವುದನ್ನು ನಿಗದಿತ ಸಮಯದಲ್ಲಿ ಚುರುಕಾಗಿ ಹಾಗೂ ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂ:FD(Spl) 5 CPP/90 ದಿನಾಂಕ 14.05.1990.
2) ಸರ್ಕಾರದ ಸುತ್ತೋಲೆ ಸಂ:FD(Spl) 52 CPP/03 ದಿನಾಂಕ 02.05.2003.
3) ಮಾನ್ಯ ಕುಲಪತಿಗಳ ಒಪ್ಪಿಗೆ ದಿನಾಂಕ 18.03.2015.

~*~

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಕೇಂದ್ರ ಸ್ಥಾನ, ತೋಟಗಾರಿಕೆ ಮಹಾವಿದ್ಯಾಲಯ, ಪ್ರಾ.ತೋ.ಸಂ. ಮತ್ತು ವಿ. ಕೇಂದ್ರಗಳು ಹಾಗೂ ಯೋಜನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಅಧಿಕಾರಿಗಳು ಮತ್ತು ಮುಖ್ಯಸ್ಥರುಗಳು ನಿವೃತ್ತಿ ಹೊಂದುವ ಶಿಕ್ಷಕ / ಶಿಕ್ಷಕೇತರ ನೌಕರರ ನಿವೃತ್ತಿ ವೇತನ ಪಾವತಿ ಕ್ಲೇಮನ್ನು ಇತ್ಯರ್ಥಪಡಿಸುವುದನ್ನು ನಿಗದಿತ ಸಮಯದಲ್ಲಿ ಚುರುಕಾಗಿ ಹಾಗೂ ತ್ವರಿತವಾಗಿ ಪೂರ್ಣಗೊಳಿಸಲು ಕಡ್ಡಾಯವಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಯಪಡಿಸಲಾಗಿದೆ.

1) ಸರ್ಕಾರಿ/ವಿಶ್ವವಿದ್ಯಾಲಯದ ನೌಕರನು ನಿವೃತ್ತಿ ಹೊಂದುವ ದಿನದಂದೇ ನಿವೃತ್ತಿ ವೇತನ ಪಡೆಯುವುದು ಸರ್ಕಾರದ ಕಾರ್ಯನೀತಿಯಾಗಿರುತ್ತದೆ. ಅದರಂತೆ ಸಾಕಷ್ಟು ನಿಯಮಗಳನ್ನು ರಚಿಸಿದ್ದು, ಅದಕ್ಕೆ ಕ.ನಾ.ಸೇ. ನಿಯಮಗಳನ್ವಯ ಕೆಲವೊಂದು ತಿದ್ದುಪಡಿಗಳನ್ನು ಜಾರಿಗೆ ತರಲಾಗಿದ್ದು, ನಿವೃತ್ತಿ ವೇತನದ ಅರ್ಜಿ ಮತ್ತು ದಸ್ತಾವೇಜುಗಳನ್ನು ತಯಾರಿಸಿ ಅವುಗಳನ್ನು ಸಂಬಂಧಿತ ಮಂಜೂರಾತಿ ಅಧಿಕಾರಿಗೆ ಕಳುಹಿಸಲು ನಿಗದಿತ ಸಮಯ ಗೊತ್ತುಪಡಿಸಲಾಗಿದೆ.
2) ನಿವೃತ್ತಿ ವೇತನದ ಹಕ್ಕಿಗಾಗಿ ನಿವೃತ್ತಿ ವೇತನ ಪಾವತಿಯ ಅರ್ಜಿಗಳನ್ನು ರವಾನಿಸುವ ಅಧಿಕಾರಿಗಳ ಉಪಯೋಗಕ್ಕಾಗಿ ಈ ಕೆಳಕಂಡಂತೆ ಕೆಲವೊಂದು ಪ್ರಮುಖವಾದ ನಿಯಮಗಳನ್ನು ಅಧಿಕಾರಿಗಳ ಪರಾಮರ್ಷೆಗೆ ರಚಿಸಲಾಗಿದ್ದು, ಅದರಂತೆ ನಿವೃತ್ತಿ ವೇತನ ಪಾವತಿಗೆ ಸಂಬಂಧಿಸಿದಂತೆ ಅನುಸರಿಸುವ ಕಾರ್ಯಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.
3) ನಿವೃತ್ತಿ ವೇತನಕ್ಕಾಗಿ ಅರ್ಜಿಗಳು ಮತ್ತು ಮಂಜೂರಾತಿ :

| ಕ್ರ.ಸಂ. | ಕ.ನಾ.ಸೇ.ನಿ. ನಿಯಮಗಳು | ತೆಗೆದುಕೊಳ್ಳಬೇಕಾದ ಕ್ರಮ (Provisions) |
|---|---|---|
| 1 | 321 (1&2) | ಕಚೇರಿಯ ಮುಖ್ಯಸ್ಥರು ನಿವೃತ್ತಿ ಹೊಂದಲಿರುವ ಪತ್ರಾಂಕಿತ / ಅಪತ್ರಾಂಕಿತ ಸರ್ಕಾರಿ/ನೌಕರನಿಂದ 1ಬಿ ನಮೂನೆಯಲ್ಲಿ ಅವನ(ಳ) ನಿವೃತ್ತಿಯ ದಿನಾಂಕಕ್ಕಿಂತ ಒಂದು ವರ್ಷಕ್ಕೆ ಮೊದಲೇ ವಿವರಗಳನ್ನು ಪಡೆದುಕೊಳ್ಳತಕ್ಕದ್ದು. |
| | 321 (3) | ನಿವೃತ್ತಿ ವೇತನ ಪ್ರಸ್ತಾವನೆಯನ್ನು 1ಬಿ ನಮೂನೆ ಮತ್ತು ಇತರೆ ನಿವೃತ್ತಿ ವೇತನ ದಾಖಲೆಗಳೊಂದಿಗೆ ನಿವೃತ್ತಿ ದಿನಾಂಕಕ್ಕಿಂತ ಎರಡು ತಿಂಗಳ ಮೊದಲೇ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ ತಲುಪಲು ಅನುವಾಗುವಂತೆ ಈ ಕಚೇರಿಗೆ ಕಳುಹಿಸಿಕೊಡತಕ್ಕದ್ದು. |
| | 321 (6) | ಸಂಬಂಧಿತ ನಿಯಂತ್ರಣಾಧಿಕಾರಿಗಳು / ಮೇಲಾಧಿಕಾರಿಗಳು ವಿಶ್ವವಿದ್ಯಾಲಯದಿಂದ ಪ್ರತಿ ವರ್ಷ ಪ್ರಕಟವಾಗುವ ವಯೋ ನಿವೃತ್ತಿ ಹೊಂದಲಿರುವ ನೌಕರರ ಪಟ್ಟಿಯಲ್ಲಿ ತಮ್ಮ ಅಧೀನದಲ್ಲಿ ಬರುವ ನೌಕರರ ಸೇವಾ ಪುಸ್ತಕ ತಮ್ಮ ಸುಪರ್ದಿಯಲ್ಲಿ ಲಭ್ಯವಿರುವ ಅಥವಾ ಇಲ್ಲದಿರುವ ಬಗ್ಗೆ ಹಾಗೂ ಸದರಿ ಸೇವಾ ಪುಸ್ತಕ ಪರಿಶೀಲಿಸಿ ಶೀಘ್ರವೇ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. |

| | | |
|---|---|---|
| | 321 (7) | ಸಂಬಂಧಿತ ಮುಖ್ಯಸ್ಥರು / ನಿಯಂತ್ರಣಾಧಿಕಾರಿಗಳು / ಮೇಲಾಧಿಕಾರಿಗಳು 6ನೇ ಉಪನಿಯಮದಡಿ ವಿಶ್ವವಿದ್ಯಾಲಯದಿಂದ ಪ್ರಕಟವಾದ ಪಟ್ಟಿಯನ್ನು ಪಡೆದುಕೊಂಡ ಕೂಡಲೇ ಸೇವಾ ಪುಸ್ತಕ ಲಭ್ಯವಿರುವ ಬಗ್ಗೆ ಪರಿಶೀಲಿಸುವುದಲ್ಲದೇ ನಿಯಮಿತವಾಗಿ ಎಲ್ಲಾ ನಮೂದುಗಳು ಅಂದಿನವರೆಗೆ ದಾಖಲಾಗಿದೆಯೇ ಎಂಬುದನ್ನು ಪರಿಶೀಲಿಸಿ, ಸೂಕ್ತ ಕ್ರಮಕೈಗೊಳ್ಳುವುದು. ನಂತರ ಸೇವಾ ಪುಸ್ತಕ, ಬೇಬಾಕಿ ಪ್ರಮಾಣ ಪತ್ರ ಮತ್ತು 1ಬಿ ನಮೂನೆಯಲ್ಲಿ ವಿವರಗಳನ್ನು ಸದರಿ ಪಟ್ಟಿಯನ್ನು ಸ್ವೀಕರಿಸಿದ ದಿವಸದಿಂದ ಒಂದು ತಿಂಗಳೊಳಗಾಗಿ ಆಡಳಿತಾಧಿಕಾರಿಗಳಿಗೆ ಕಳುಹಿಸಿ ಕೊಡತಕ್ಕದ್ದು.<br>ಆಡಳಿತಾಧಿಕಾರಿಗಳು / ಹಣಕಾಸು ನಿಯಂತ್ರಣಾಧಿಕಾರಿಗಳು ಸರಕಾರಿ ನೌಕರರ ನಿವೃತ್ತಿ ಹೊಂದಲಿರುವ ದಿನಾಂಕಕ್ಕೆ 15 ದಿನಗಳ ಮೊದಲೇ ಅಂತಿಮ ನಿವೃತ್ತಿ ವೇತನ ಪಾವತಿ ಆದೇಶವನ್ನು ಹೊರಡಿಸಿರುವ ಮಾಹಿತಿಯನ್ನು ನಿವೃತ್ತಿ ಹೊಂದುವ ಸರ್ಕಾರಿ ನೌಕರನು ತನ್ನ ನಿವೃತ್ತಿಯ ದಿನಾಂಕದಂದು ತನ್ನ ನಿವೃತ್ತಿ ವೇತನದ ಪಾವತಿಯನ್ನು ಪಡೆಯಲು ಸಾಧ್ಯವಾಗುವಂತೆ ಸಂಬಂಧಿತ ನಿಯಂತ್ರಣಾಧಿಕಾರಿಗಳು ಕ್ರಮಕೈಗೊಂಡು ನಿಯಮಾನುಸಾರ ಪಿಂಚಣಿ ಪ್ರಪತ್ರಗಳನ್ನು ಕಳುಹಿಸಿಕೊಡತಕ್ಕದ್ದು. |
| 2 | 322 | ನಿವೃತ್ತಿ ವೇತನ ಸಂದಾಯಗಳಲ್ಲಾಗುವ ವಿಳಂಬವನ್ನು ತಡೆಯಲು ಅದು ಬರಬೇಕಾದ ದಿನದಿಂದಲೇ ಸರ್ಕಾರಿ ನೌಕರನು ತನ್ನ ನಿವೃತ್ತಿ ವೇತವನ್ನು ಪಡೆಯುವಂತೆ ಖಚಿತ ಏರ್ಪಾಟು ಮಾಡುವುದು ಅವಶ್ಯ. ಸರ್ಕಾರಿ ನೌಕರರಿಂದ ಅವರ ನಿವೃತ್ತಿ ಸಮಯದಲ್ಲಿ ಸರ್ಕಾರಕ್ಕೆ ಸಲ್ಲಬಹುದಾದಂಥ ವೇತನ ಭತ್ಯೆ ರಜಾ ಸಂಬಳ, ನಿರ್ವಿವಾದವಾಗಿ ಕೊಡಬೇಕಾದ ಮನೆಬಾಡಿಗೆ, ಜೀವವಿಮಾ ಕಂತು ಅಥವಾ ಬೇರೆ ಬೇರೆ ಬಗೆಯಾಗಿ ಪಡೆದ ಮುಂಗಡಗಳ ಬಾಕಿ ಮೊದಲಾದವುಗಳ ಅಧಿಕ ಸಂದಾಯ ಇತ್ಯಾದಿಗಳ ಕುರಿತು ಸರ್ಕಾರಿ ನೌಕರನ ಅನುಮತಿಯನ್ನು ಪಡೆಯದ ಹೊರತು ಈ ಬಾಕಿ ಬರಬೇಕಾದ ಮೊಬಲಗುಗಳನ್ನು ಅವನ ನಿವೃತ್ತಿ ವೇತನದಿಂದ ವಸೂಲು ಮಾಡಲು ಬರುವುದಿಲ್ಲ. ಆದುದರಿಂದ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಅಧಿಕಾರಿಗಳು ಈ ಮೊತ್ತಗಳು ಬಾಕಿ ಉಳಿದಿರುವುದನ್ನು ಆದಷ್ಟು ಬೇಗ ಸಂಬಂಧಪಟ್ಟ ಸರ್ಕಾರಿ ನೌಕರರ ಗಮನಕ್ಕೆ ತಂದು ನಿವೃತ್ತಿ ವೇತನವನ್ನು ಕೊನೆಗೊಮ್ಮೆ ಯಥಾಕ್ರಮದಲ್ಲಿ ಮಂಜೂರು ಮಾಡುವ ಮೊದಲು ಅವನ್ನೆಲ ಸಂದಾಯ ಮಾಡುವಂತೆ ಅವನನ್ನು ಕೇಳಬೇಕು. ಇಂಥ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನಿವೃತ್ತಿ ವೇತನ ಮಂಜೂರು ಮಾಡುವುದರಲ್ಲಾಗಲಿ ತಪ್ಪಿಸಬಹುದಾದಂಥ ವಿಳಂಬವು ಆಗಿಲ್ಲವೆಂಬ ಬಗ್ಗೆ ಎಚ್ಚರಿಕೆವಹಿಸಬೇಕೆಂಬುದನ್ನು ಒತ್ತಿ ಹೇಳಲಾಗಿದೆ.<br>ಸಂಬಂಧಿತ ಮುಖ್ಯಸ್ಥರು / ನಿಯಂತ್ರಣಾಧಿಕಾರಿಗಳು / ಮೇಲಾಧಿಕಾರಿಗಳು ನಿವೃತ್ತಿ ಹೊಂದಲಿರುವ ನೌಕರನಿಂದ ವಸೂಲಾಗದೆ ಬಾಕಿ ಉಳಿದ ಪಿಂಚಣಿಯ ಕಾಗದ ಪತ್ರ ಮತ್ತು ದಾಖಲೆಗಳೊಂದಿಗೆ ಆಡಳಿತಾಧಿಕಾರಿಗಳಿಗೆ / ಹಣಕಾಸು ನಿಯಂತ್ರಣಾಧಿಕಾರಿಗಳಿಗೆ ಕಳುಹಿಸಿ ಕೊಡತಕ್ಕದ್ದು. ವಸೂಲಾಗದ ಬಾಕಿ ಉಳಿದ ಮೊತ್ತವನ್ನು ನಿವೃತ್ತಿದಾರನ ಡಿ.ಸಿ.ಆರ್.ಜಿ. ಯಿಂದ ವಸೂಲಿ ಮಾಡಿಕೊಳ್ಳತಕ್ಕದ್ದು.<br>ನಿವೃತ್ತಿದಾರನಿಂದ ಬರಬೇಕಾದ ಬೇಬಾಕಿ ಮೊತ್ತವನ್ನು ಲೆಕ್ಕ ಹಾಕಿ ಆಡಳಿತಾಧಿಕಾರಿಗಳಿಗೆ / ಹಣಕಾಸು ನಿಯಂತ್ರಣಾಧಿಕಾರಿಗಳಿಗೆ ತಿಳಿಸಲು ವಿಫಲವಾಗುವುದರಿಂದ ಸರ್ಕಾರಕ್ಕೆ/ವಿಶ್ವವಿದ್ಯಾಲಯಕ್ಕೆ ಉಂಟಾಗುವ ನಷ್ಟಕ್ಕೆ ವೈಯಕ್ತಿಕವಾಗಿ ಕಚೇರಿಯ ಮುಖ್ಯಸ್ಥರೇ ನೇರ ಹೊಣೆಗಾರರಾಗುತ್ತಾರೆ ಎಂಬುದನ್ನು ಅರಿತಿರಬೇಕು. |

..3

| | | |
|---|---|---|
| | | ನಿವೃತ್ತಿದಾರರಿಂದ ವಸೂಲು ಮಾಡಬೇಕಾದ ಬಾಕಿ ಮೊತ್ತದ ಕುರಿತಾದ ಮಾಹಿತಿಯು ಇಲಾಖೆ/ಮುಖ್ಯಸ್ಥರಿಂದ ನಿವೃತ್ತಿಯ ಒಳಗಾಗಿ ತಲುಪದೇ ಇದ್ದ ಸಂದರ್ಭದಲ್ಲಿ ಹಣಕಾಸು ನಿಯಂತ್ರಣಾಧಿಕಾರಿಗಳು ಅಂಥ ನಿವೃತ್ತಿದಾರರ ಡಿ.ಸಿ.ಆರ್.ಜಿ. ಯ 10% ಅಥವಾ ರೂ.10,000/- ಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮುಂದಿನ 6 ತಿಂಗಳ ತನಕ ಹಿಡಿದಿಟ್ಟುಕೊಳ್ಳಬೇಕೆಂದಿರುತ್ತದೆ. ವಸೂಲು ಮಾಡಬೇಕಾದ ನಿರ್ದಿಷ್ಟ ಮೊತ್ತದ ಕುರಿತು ಮೇಲಿನ ಕಾಲಾವಧಿಯೊಳಗಾಗಿ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ ಸಂಪೂರ್ಣ ಮಾಹಿತಿ ಲಭ್ಯವಾಗದೇ ಇದ್ದ ಪಕ್ಷದಲ್ಲಿ ಲಭ್ಯವಿರುವಷ್ಟು ಮಾಹಿತಿ ಅನ್ವಯ ಹಾಗೂ ಅವರ ಲೆಕ್ಕ ದಾಖಲೆಗಳ ಅನ್ವಯ ವಸೂಲು ಮಾಡಬೇಕಾದ ಮೊತ್ತವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು ವಸೂಲು ಮಾಡಿ ಉಳಿದ ಮೊತ್ತವನ್ನು ನಿವೃತ್ತ ನೌಕರರಿಗೆ 6 ತಿಂಗಳ ನಿಗಧಿತ ಕಾಲಾವಧಿಯ ನಂತರ ಪಾವತಿ ಮಾಡಬೇಕೆಂದಿರುತ್ತದೆ. ಆದಾಗ್ಯೂ, ನಿವೃತ್ತಿದಾರರಿಂದ ವಸೂಲು ಮಾಡಬೇಕಾದ ಬಾಕಿ ಮೊತ್ತವು ಅಂದಾಜು ಮೇಲೆ ತಿಳಿಸಿದಂತೆ ಗರಿಷ್ಠ ರೂ.10,000/- ಕ್ಕಿಂತ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ಸಂಬಂಧಿತ ನಿಯಂತ್ರಣಾಧಿಕಾರಿಗಳು ನಿರ್ದಿಷ್ಟವಾಗಿ ಲಿಖಿತದಲ್ಲಿ ಮನವಿ ಮಾಡಿದ್ದಲ್ಲಿ ಮಾತ್ರ ನಿವೃತ್ತಿದಾರನ ಸಂಪೂರ್ಣ ಡಿ.ಸಿ.ಆರ್.ಜಿ. ಮೊತ್ತವನ್ನು ನಿಗದಿತ 6 ತಿಂಗಳುಗಳವರೆಗೆ ಮಾತ್ರ ತಡೆಹಿಡಿಯುವುದು. ನಿಗದಿತ 6 ತಿಂಗಳ ಅವಧಿಯೊಳಗಾಗಿ ಸಂಬಂಧಿತ ನಿಯಂತ್ರಣಾಧಿಕಾರಿಗಳು ನಿರ್ದಿಷ್ಠ ಬಾಕಿ ಮೊತ್ತವನ್ನು ತಡೆಹಿಡಿದ ಡಿ.ಸಿ.ಆರ್.ಜಿ. ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ನಿವೃತ್ತಿದಾರರಿಗೆ ಮತ್ತು ವಿಶ್ವವಿದ್ಯಾಲಯಕ್ಕೆ ಮಾಹಿತಿ ನೀಡುವುದು. ಇದಕ್ಕೆ ತಪ್ಪಿದಲ್ಲಿ, ಸದರಿ ಬಾಕಿ ಮೊತ್ತದ ಮಾಹಿತಿ ನೀಡಲು ವಿಫಲವಾದ ಸಂಬಂಧಿತ ನಿಯಂತ್ರಣಾಧಿಕಾರಿಗಳೇ ಸದರಿ ವಿಳಂಬಕ್ಕೆ ಜವಾಬ್ದಾರರಾಗುವರು.<br>ಈ ಎಲ್ಲ ವಿಷಯಗಳನ್ನು ಅವಲೋಕಿಸಿದ ಸರ್ಕಾರವು ತನ್ನ ಆದೇಶ ಸಂಖ್ಯೆ:ಎಫ್‌ಡಿ(ವಿಶೇಷ) 864, ಪಿಇಎನ್ 84 ದಿನಾಂಕ 14.08.1985 ರಲ್ಲಿ ತಡವಾಗಿ ಪಾವತಿ ಮಾಡುವ ಉಪದಾನದ ಮೇಲೆ ಬಡ್ಡಿಯನ್ನು ಅದರಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಂತೆ ನಿವೃತ್ತಿ ಹೊಂದಿದ 4ನೇ ತಿಂಗಳ ಪ್ರಾರಂಭದಿಂದ ಪಾವತಿಸಲು ಆದೇಶಿಸಿದೆ. ಸದರಿ ಆದೇಶದಲ್ಲಿ ಉಪದಾನದ ಪಾವತಿಯಲ್ಲಿ ವಿಳಂಬವಾಗಿರುವ ಸಂದರ್ಭಗಳನ್ನು ಪೂರ್ಣವಾಗಿ ಪರಿಶೀಲಿಸಿ ವಿಳಂಬಕ್ಕೆ ನಿವೃತ್ತಿದಾರರು ಹೊಣೆಯಾಗದಿದ್ದಲ್ಲಿ ಮತ್ತು ಬಡ್ಡಿ ಪಾವತಿಯ ಅವಕಾಶವಿರುವ ಬಗ್ಗೆಯೂ ಮತ್ತು ವಿಳಂಬಕ್ಕೆ ಕಾರಣವಾದವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಹಾಗೂ ಬಡ್ಡಿ ಹಣವನ್ನು ಅವರಿಂದ ವಸೂಲಿ ಮಾಡುವ ಬಗ್ಗೆಯೂ ವಿವರವಾದ ವರದಿಯನ್ನು ಸಲ್ಲಿಸಬೇಕೆಂದೂ, ತದನಂತರವೇ ಆದೇಶವನ್ನು ಹೊರಡಿಸತಕ್ಕದ್ದು ಎಂದು ನಿಗದಿಪಡಿಸಲಾಗಿದೆ. ಮುಂದುವರಿದು ತಡವಾಗಿ ಪಾವತಿಯಾದ ಪಿಂಚಣಿ ಉಪದಾನ ಮತ್ತು ರಜೆ ನಗದೀಕರಣ ಇವುಗಳ ಮೇಲೆ ನೀಡುವ ಬಡ್ಡಿದರವನ್ನು ವಾರ್ಷಿಕ 12% ರಿಂದ 8% ಗೆ ಇಳಿಸಿ ಪರಿಷ್ಕರಿಸಿದ ಸರ್ಕಾರಿ ಆದೇಶ ಸಂಖ್ಯೆ:ಆಇ(ವಿ) 1 ಪಿಇಎಸ್ 03 ಬೆಂಗಳೂರು ದಿನಾಂಕ 21.08.2003 ನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳುವುದು. |